## ಹುಡುಗಿ ಹುಡುಕಾಟದಲ್ಲಿ ರ‍್ಯಾಸ್ಕಲ್!

ಚಿತ್ರದ ಹೆಸರು 'ರ‍್ಯಾಸ್ಕಲ್'. ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವಕ್ಕೆ ಚಾಲನೆ ದೊರೆತ ದಿನವೇ 'ರ‍್ಯಾಸ್ಕಲ್' ಮುಹೂರ್ತವೂ ನಡೆಯಿತು. ಚಿತ್ರದ ನಿರ್ದೇಶಕ ಕೆ.ಮಾದೇಶ. 'ರಾಮರಾಮ, ಇಂಥದೊಂದು ಹೆಸರನ್ನು ಸಿನಿಮಾಕ್ಕೆ ಇಡಬಹುದೇ' ಎನ್ನುವ ಪ್ರಶ್ನೆ ಮುಹೂರ್ತದ ಸಂದರ್ಭದಲ್ಲಿ ಕೇಳಿ ಬಂತು. ಇದಕ್ಕೆ ಚಿತ್ರತಂಡದ ಸ್ಪಷ್ಟನೆ– ಕಥೆಗೆ ಈ ಹೆಸರು ಹೊಂದುತ್ತದೆ. 'ಇವನು ಪ್ರೀತಿಸಬಹುದಾದ ರ‍್ಯಾಸ್ಕಲ್' ಎನ್ನುವುದು ನಿರ್ದೇಶಕರ ಅನಿಸಿಕೆ.

ರ‍್ಯಾಸ್ಕಲ್ ಆಗಿ ನಟಿಸುತ್ತಿರುವುದು 'ರೆಬೆಲ್' ಆದಿತ್ಯ. ಅವರಿಗೆ ಈ ಪಾತ್ರ ವಿಭಿನ್ನ ಅನ್ನಿಸಿದೆ. ಕೀಳರಿಮೆ ಅನುಭವಿಸುವ ಹೆಣ್ಣೊಬ್ಬಳ ಬದುಕಿನಲ್ಲಿ ಆತ್ಮವಿಶ್ವಾಸ ಪಾತ್ರದಲ್ಲಿ ನಟಿಸುವುದು ಸವಾಲೂ ಎಂದೂ ಅವರಿಗನ್ನಿಸಿದೆ. ಕೊಂಚ ಹಾಸ್ಯ, ಕೊಂಚ ಸಾಹಸ ಅವರ ಪಾತ್ರದಲ್ಲಿದೆಯಂತೆ.

ಆದಿತ್ಯನಿಂದ ಧೈರ್ಯ ತುಂಬಿಸಿಕೊಳ್ಳುವ ನಾಯಕಿಯ ಪಾತ್ರಕ್ಕಿನ್ನೂ ಚೆಲುವೆಯ ಆಯ್ಕೆ ಮುಗಿದಿಲ್ಲ. ಕನ್ನಡದ ಪಳಗಿದ ಹುಡುಗಿಯರಿಗೆಲ್ಲಾ ಕೈತುಂಬ ಕೆಲಸವಂತೆ. ಹಾಗಾಗಿ ಹೊಸ ನಾಯಕಿಯ ಹುಡುಕಾಟದಲ್ಲಿದ್ದೇವೆ ಎಂದರು ಮಾದೇಶ. 'ಹುಡುಗನಿಗೆ ಹುಡುಗಿ ಬೇಗ ಸಿಕ್ಕಲಿ. ರ‍್ಯಾಸ್ಕಲ್ ದೆಸೆ ಬದಲಾಗಲಿ' ಎನ್ನುವ ಸುದ್ದಿಮಿತ್ರರ ಹಾರೈಕೆಯೊಂದಿಗೆ ಸುದ್ದಿಗೋಷ್ಠಿಗೆ ಮಂಗಳಂ.



## ದಂಡುಪಾಳ್ಯದ ನಡುವೆ..



ಪೂಜಾ ಗಾಂಧಿ ಬಗ್ಗೆ ಗಾಂಧೀ ನಗರ ಮತ್ತೆ ಮಾತನಾಡತೊಡಗಿದೆ. 'ದಂಡುಪಾಳ್ಯ' ಚಿತ್ರದಲ್ಲಿ ಅವರು ಅರೆನಗ್ನರಾಗಿ ಕಾಣಿಸಿಕೊಂಡಿದ್ದಾರೆ ಎನ್ನುವುದು ಮಾತಿಗೆ ಕಾರಣ.

ನರಹಂತಕ ತಂಡದ ಕಥೆ ಹೇಳ ಹೊರಟಿರುವ 'ದಂಡುಪಾಳ್ಯ' ಚಿತ್ರದ ನಿರ್ದೇಶಕ ಶ್ರೀನಿವಾಸ ರಾಜು. ಈ ಮೊದಲು 'ಕೋಟೆ' ಚಿತ್ರದ ಮೂಲಕ ಗಮನ ಸೆಳೆದಿದ್ದ ರಾಜು, ಈಗ ವರ್ತಮಾನದ ಕ್ರೌರ್ಯದ ಕಥನವೊಂದನ್ನು ಸಿನಿಮಾ ಮಾಡಲಿಕ್ಕೆ ಹೊರಟಿದ್ದಾರೆ. ಪ್ರತಿಭಾವಂತ ಕಲಾವಿದರನ್ನು ಒಟ್ಟು ಮಾಡಿಕೊಂಡಿರುವ ಅವರು ಸದ್ದಿಲ್ಲದೆಯೇ ಚಿತ್ರೀಕರಣ ನಡೆಸುತ್ತಿದ್ದರೂ, ಚಿತ್ರೀಕರಣ ಸ್ಥಳದಿಂದ ಒಂದೊಂದೇ ಸುದ್ದಿಗಳು ಹೊರಬೀಳುತ್ತಿವೆ. ಅವುಗಳಲ್ಲಿ ಮೊದಲನೆಯದು ಕರಿಸುಬ್ಬು ಹೆಚ್ಚೂ ಕಡಿಮೆ ದಿಗಂಬರರಾಗಿ ನಟಿಸಿರುವುದು! ಅದರ ಮುಂದುವರಿದ ಭಾಗವಾಗಿ ಪೂಜಾ ಅರೆ ಬೆತ್ತಲೆಯ ಸುದ್ದಿ. ಪಾತ್ರದ ಅಗತ್ಯಕ್ಕೆ ತಕ್ಕಂತೆ ಈ ಸನ್ನಿವೇಶಗಳು ಚಿತ್ರದಲ್ಲಿ ಇರಲಿವೆಯೇ ಹೊರತು, ಯಾವುದೇ ಅಶ್ಲೀಲತೆ ಚಿತ್ರದಲ್ಲಿ ಇರುವುದಿಲ್ಲ ಎನ್ನುವುದು ನಿರ್ದೇಶಕರ ಸ್ಪಷ್ಟನೆ. ಒಟ್ಟಿನಲ್ಲಿ 'ದಂಡುಪಾಳ್ಯ' ಕುತೂಹಲ ಹುಟ್ಟು ಹಾಕುತ್ತಿರುವುದಂತೂ ನಿಜ..

## ಮರಳಿ ಕಲ್ಪನಾ ನೆನಪು



ವಿಷ್ಣು ಕೃಪೆಗಾಗಿ 'ವಿಷ್ಣುವರ್ಧನ', 'ವಿಷ್ಣು' ಹೆಸರಿನ ಸಿನಿಮಾಗಳ ತೆರೆ ಕಂಡಾಯಿತು. ಈಗ ಮಿನುಗುತಾರೆ ಕಲ್ಪನಾ ಸರದಿ. ಕಳೆದ ವಾರವಷ್ಟೇ 'ಕಲ್ಪನಾ' ಹೆಸರಿನ ಚಿತ್ರ ಸೆಟ್ಟೇರಿದೆ.

ರಾಮನಾರಾಯಣ್ 'ಕಲ್ಪನಾ' ಚಿತ್ರದ ನಿರ್ದೇಶಕರು. ಅರ್ಧ ಶತಕದ ದಾಖಲೆ ಈ ನಿರ್ದೇಶಕರದು. ಕನ್ನಡದಲ್ಲಿ ಹತ್ತು ಸೇರಿದಂತೆ ನೂರಿಪ್ಪತ್ತೈದು ಸಿನಿಮಾ ನಿರ್ದೇಶಿಸಿರುವ ದಾಖಲೆ ಅವರದು. ಒಂದಾನೊಂದು ಕಾಲದಲ್ಲಿ ಆನೆ, ಕೋತಿ, ನಾಯಿಯ ಜೊತೆಗೆ ಬೇಬಿ ಶಾಮಿಲಿ ಎನ್ನುವ ಅರಳು ಕಂಗಳ ಬಾಲಕಿಯನ್ನು ಹಾಕಿಕೊಂಡು ಸಿನಿಮಾ ಮಾಡಿದ್ದ ಅವರು ಈಗ ಕನ್ನಡದಲ್ಲಿ ಮತ್ತೊಂದು ಇನಿಂಗ್ಸ್ ಆರಂಭಿಸುತ್ತಿದ್ದಾರೆ. ಪ್ರಾಣಿಗಳೊಂದಿಗೆ ಅವರ ಚಿತ್ರಗಳಲ್ಲಿ ಖಾಯಂ ಆಗಿ ಇರುತ್ತಿದ್ದ ನಟಿ ಶ್ರುತಿ ಅವರೂ 'ಕಲ್ಪನಾ'ದಲ್ಲಿದ್ದಾರೆ.

ಮತ್ತೆ ಮಿನುಗುತಾರೆಯ ವಿಷಯಕ್ಕೆ ಬರೋಣ. 'ಶರಪಂಜರ' ಚಿತ್ರದಲ್ಲವರು ಮಾನಸಿಕ ತಾಕಲಾಟಕ್ಕೆ ಒಳಗಾಗಿ, ಮೈಮೇಲೆ ಪ್ರೇತಾತ್ಮ ಆವಾಹನೆಯಾದಂತೆ ಒದ್ದಾಡುತ್ತಾರಲ್ಲ; ಆ ನೆನಪನ್ನು ಈ ಚಿತ್ರವೂ ತರಿಸಲಿದೆ. ಚಿತ್ರದಲ್ಲಿ ಕೆಲವು ವಿಶೇಷಗಳಿವೆ. ಉಪೇಂದ್ರ ಚಿತ್ರದ ನಾಯಕ ಎನ್ನುವುದು ಮೊದಲ ವಿಶೇಷ. ಅವರ ಇಮೇಜ್‌ಗೆ ಹೊಂದುವ ಪಾತ್ರವನ್ನು ನಿರ್ದೇಶಕರು ರೂಪಿಸಿದ್ದಾರಂತೆ. ಎರಡನೇ ವಿಶೇಷ ಖೋಜಾ ಪಾತ್ರದಲ್ಲಿ ನಟಿಸುತ್ತಿರುವ ಸಾಯಿಕುಮಾರ್. 'ಮಿಂಚಿನ ಓಟ'ದ ನಂತರ ಮರೆಯಾಗಿದ್ದ ಲಕ್ಷ್ಮೀ ರೈ ಈ ಚಿತ್ರದ ಮೂಲಕ ಕನ್ನಡಕ್ಕೆ ಮರಳುತ್ತಿದ್ದಾರೆ. ಅಂದ ಹಾಗೆ, ಕನ್ನಡದ 'ಕಲ್ಪನಾ' ತಮಿಳಿನ 'ಕಾಂಚನಾ' ಚಿತ್ರದ ರಿಮೇಕ್.

■ ರಘು